

# ಜೇನು ಬರಲಿಲ್ಲ!

**ಜೀವ ಸರಪಳಿಯ ತಳ ಸ್ಥರದಲ್ಲಿ ಇರುವ ಜೇನುಗಳು ಪರಾಗಸ್ಪರ್ಶಕ್ಕೆ ಮಹತ್ತರ ಕೊಡುಗೆ ನೀಡುತ್ತವೆ. ನಾವು ತಿನ್ನುವ ಹಣ್ಣು, ತರಕಾರಿಗಳಲ್ಲಿ ಜೇನಿನ ಪಾತ್ರ ಇದ್ದೇ ಇದೆ. ಮನೆಗೆ ಪಾಯ ಎಷ್ಟು ಮುಖ್ಯವೋ ಅಂತೆಯೇ ಜೀವ ಸರಪಳಿಗೆ ಈ ಜೀವಿಗಳ ಉಳಿವೂ ಮುಖ್ಯ. ಇದರ ಅರಿವಿಲ್ಲದ ಮನುಷ್ಯ ತನ್ನ ಇರುವಿಗಾಗಿ ಎಲ್ಲವನ್ನೂ ಕದಡುತ್ತಿದ್ದಾನೆ.**

■ ವಿನು ಗಂಗೆ

ಮಲೆನಾಡಿನ ಸುಗಂಧಿತ ಹೂಗಳಲ್ಲಿ ಸುರಗಿಗೇ ಪ್ರಥಮ ಸ್ಥಾನ ಎನ್ನುವುದು ನಿರ್ವಿವಾದಿತ. ಸುರಗಿ ಹೂಗಳನ್ನು ನೋಡದೇ ದಶಕಗಳೇ ಕಳೆದಿತ್ತು. 'ಮರಗಳ ಕತೆ'ಯಲ್ಲಿ ಹಿಂದೆ ಹೇಳಿದ ಜಾಲಗರಿಯಂತೆ ಸುರಗಿ ಕೂಡ ಶಿವರಾತ್ರಿ ಆಸುಪಾಸಿನಲ್ಲಿ ಮಾತ್ರ ಅರಳುವ ಹೂವು. ಅದೂ ಏಳು ದಿನಗಳ ಕಾಲ ಮಾತ್ರ. ಈ ಸಲ ಶಿವರಾತ್ರಿ ಸಮಯದಲ್ಲಿ ಊರಲ್ಲಿ ಇದ್ದುದರಿಂದ ಯಜಮಾನರಲ್ಲಿ ಸುರಗಿ ಹೂವನ್ನು ಮರದಲ್ಲೇ ನೋಡಬೇಕೆಂಬ ಬೇಡಿಕೆ ಇರಿಸಿದೆ.



ಹಿರಿಯ ಸ್ನೇಹಿತರಾದ ಆನೆಗುಳಿ ಸುಬ್ಬರಾಯರಿಗೆ ಕರೆ ಮಾಡಿ ಸುರಗಿ ಅರಳಿರುವುದನ್ನು ಖಚಿತಪಡಿಸಿಕೊಂಡು ಹೊರಟೆವು. ಸುಬ್ಬರಾಯರದ್ದು ಸಾಗರದ ಬಳಿ ಸಂಪೂರ್ಣ ಮಲೆನಾಡಿನ ಮಡಿಲಲ್ಲಿ ಆನೆಗುಳಿ ಎಂಬ ಊರು. ಸುಬ್ಬರಾಯರನ್ನು 'ಬೆಟ್ಟದ ಜೀವ' ಎಂದರೆ ತಪ್ಪಾಗಲಾರದು. ಹೆಂಚಿನ ಮಾಡು, ರೆಡ್ ಆಕ್ಸೈಡ್ ನೆಲದ ಕೆಂಪು ಕಣ್ತುಂಬಿಕೊಳ್ಳುವಾಗ 'ಇದು ಝರಿಯ ನೀರು. ಬೆಟ್ಟದಿಂದ ಬರುತ್ತದೆ. ಇಲ್ಲಿರುವ ಮನೆಗಳಿಗೆಲ್ಲ ಇದೇ ನೀರು, ಝರಿಯಿಂದ ಪೈಪ್ ಹಾಕಿದ್ದೇವೆ. ಬೇಸಿಗೆಯಲ್ಲೂ ಬತ್ತದ ಸಿಹಿ ನೀರು, ಕುಡಿಯಿರಿ' ಎಂದು ಝರಿ ನೀರಿನ ಬ್ರಾಂಡ್ ಅಂಬಾಸಿಡರ್‌ನಂತೆ ನೀರಿನ ಲೋಟ ಕೊಟ್ಟರು. ಪ್ರಥಮ ಭೇಟಿಯೇ ಆದರೂ ಸುಬ್ಬರಾಯ ದಂಪತಿಯ ಬಿಚ್ಚು ಮನಸ್ಸಿನ ಆದರಾತಿಥ್ಯ ಮನತುಂಬಿ, ಆನೆಗುಳಿಯಿಂದ ಸುಬ್ಬರಾಯರ ಸ್ಕೂಟರನ್ನು ಹಿಂಬಾಲಿಸಿ ಹೊರಟೆವು. ಸುಮಾರು 15 ಕಿ.ಮೀ. ದೂರ ಹೋದ ನಂತರ ಶರಾವತಿ ಹಿನ್ನೀರಿನ ಹತ್ತಿರ ಒಂದು ಸಣ್ಣ ಊರು. ಅಲ್ಲಿ ಕೃಷ್ಣಮೂರ್ತಿ ಎಂಬುವರ ಮನೆ. ಮನೆ ಸುತ್ತ ಕಾಡಿನಲ್ಲಿ ಬೇಕಾದಷ್ಟು ಮರಗಳೊಂದಿಗೆ ಸುರಗಿಯ ಬೃಹತ್ ಮರಗಳೂ ಇದ್ದವು. ಅವರನ್ನು ಪರಿಚಯಿಸುತ್ತಾ ಸುಬ್ಬರಾಯರು 'ನೋಡಿ ಇವನು ಬೆಳಿಗ್ಗೆಯೇ ಫೋನ್ ಮಾಡಿಬಿಟ್ಟಿದ್ದ ಜೇನುಗಳು ಬಂದಿಲ್ಲವೆಂದು' ಎಂದರು.

ಸುರಗಿಯ ಹೂಗಳನ್ನು ಕೈಯಲ್ಲಿ ಹಿಡಿದು ನಾವು ಆಘ್ರಾಣಿಸುವಾಗ, ಅವರಿಬ್ಬರ ನಡುವೆ ಸುರಗಿ ಹೂ ಬಿಟ್ಟರೂ ಜೇನು ಬರಲಿಲ್ಲವೆಂದು ತಳಮಳಿಸುವುದೂ, ನಂತರ

